ಸಕಾಲ ಅಧಿನಿಯಮ

2329 (2617); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಕರ್ನಾಟಕ ಸಕಾಲ ಅಧಿನಿಯಮ 2011 ರ ಉದ್ದೇಶ ಏನು; ಇದು ಎಲ್ಲಾ ಸರ್ಕಾರಿ ಇಲಾಖೆಗಳಿಗೂ ಅನ್ವಯವಾಗುತ್ತದೆಯೇ;

ಆ) ಈ ಅಧಿನಿಯಮದ ಪ್ರಕಾರ ಒಂದು ಕಾಲಮಿತಿಯಲ್ಲಿ ಅರ್ಜಿ ಅಥವಾ ಕಡತಗಳು ವಿಲೇವಾರಿಯಾಗುತ್ತವೆಯೇ;

ಇ) ಈ ಅಧಿನಿಯಮ ಜಾರಿಗೆ ಬಂದ ಮೇಲೆ ಸಾರ್ವಜನಿಕರಿಗೆ ಯಾವ ರೀತಿಯ ಅನುಕೂಲಗಳಾಗುತ್ತಿವೆ? (ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಕರ್ನಾಟಕದ ನಾಗರೀಕರಿಗೆ ಸಮಯಬದ್ಧವಾಗಿ ಸರ್ಕಾರದ ಸೇವೆಗಳನ್ನು ನೀಡುವುದು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರ ಮೂಲ ಉದ್ದೇಶವಾಗಿದೆ. ಇದು ಪ್ರಸ್ತುತ ಸಕಾಲ ಸೇವೆಗಳನ್ನು ಒದಗಿಸುತ್ತಿರುವ ಒಟ್ಟು 50 ಇಲಾಖೆ/ಸಂಸ್ಥೆಗಳಿಗೆ ಅನ್ವಯಿಸುತ್ತದೆ.

ಆ) ಸೇವೆಗಳನ್ನು ಕೋರಿ ಸಲ್ಲಿಸುವ ಅರ್ಜಿಗಳ ವಿಲೇವಾರಿಗೆ ಕಾಲಮಿತಿ ನಿಗದಿಪಡಿಸಿದೆ. ದಿನಾಂಕ: 09.07.2015 ರ ವರೆಗೆ ಒಟ್ಟು 8,18,10,229 ಅರ್ಜಿಗಳು ಸ್ವೀಕರಿಸಲಾಗಿದ್ದು, 8,04,51,187 ಅರ್ಜಿಗಳು ಕಾಲಮಿತಿಯೊಳಗೆ ವಿಲೇವಾರಿಯಾಗಿದೆ.

ಇ) ಸಕಾಲ ಸೇವೆ ಕೋರಿ ಅರ್ಜಿದಾರರು ಅರ್ಜಿ ಸಲ್ಲಿಸಿದಾಗ ಅವರಿಗೆ 15 ಸಂಖ್ಯೆಯುಳ್ಳ ವಿಶಿಷ್ಟ ಜಿಎಸ್‌ಸಿ ಸ್ವೀಕೃತಿ ಸಂಖ್ಯೆ ಲಭ್ಯವಾಗುತ್ತದೆ. ಈ ಸಂಖ್ಯೆಯನ್ನು ಬಳಸಿಕೊಂಡು ಸಕಾಲ ವೆಬ್‌ಸೈಟ್‌ನಿಂದ ಅರ್ಜಿದಾರರು ಅರ್ಜಿಯ ಪ್ರಸ್ತುತ ಕುರಿತು ಮಾಹಿತಿ ಪಡೆಯಬಹುದಾಗಿದೆ. ಅರ್ಜಿಗಳ ಸ್ವೀಕೃತಿ/ನೋಂದಣಿ ಮಾಡುವಾಗ ಅರ್ಜಿದಾರರ ಮೊಬೈಲ್ ಸಂಖ್ಯೆಯನ್ನು ನೀಡಲು ಅವಕಾಶವನ್ನು

ಕಲ್ಪಿಸಿದ್ದು, ಅರ್ಜಿಗಳ ಸ್ವೀಕೃತಿ ಮತ್ತು ವಿಲೇವಾರಿ ಮಾಹಿತಿಯನ್ನು ಸಕಾಲ ತಂತ್ರಾಂಶ ವ್ಯವಸ್ಥೆಯಿಂದ ಎಸ್‌ಎಂಎಸ್ ಸಂದೇಶದ ಮೂಲಕ ಕಳುಹಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ.

ಸಕಾಲ ಸೇವೆಗಳನ್ನು ನಿಗದಿತ ಅವಧಿಯೊಳಗೆ ಅರ್ಜಿದಾರರಿಗೆ ನೀಡಬೇಕಾಗಿದ್ದು, ಸೇವೆಗಳು ದೊರೆಯದಿದ್ದಲ್ಲಿ ಅರ್ಜಿದಾರರು ಮೇಲ್ಮನವಿಯನ್ನು ಮೇಲ್ಪಟ್ಟು ಅಧಿಕಾರಿಗಳಿಗೆ ದಾಖಲಿಸಬಹುದಾಗಿರುತ್ತದೆ. ಸೇವೆ ವಿಲೇವಾರಿಯಲ್ಲಿ ವಿಳಂಬವಾದಲ್ಲಿ ಅರ್ಜಿದಾರರು ಪ್ರತಿ ದಿನಕ್ಕೆ ₹ 20/– ರಂತೆ ಗರಿಷ್ಟ ₹ 500/– ಗಳ ಪರಿಹಾರ ಧನವನ್ನು ಪಡೆಯಬಹುದಾಗಿರುತ್ತದೆ. ನಂತರ ವಿಳಂಬ ಮಾಡಿದ ಅಧಿಕಾರಿಯ ವೇತನದಿಂದ ಇದನ್ನು ನಿಯಮಾನುಸಾರ ಕಟಾಯಿಸಿ ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ.

ಅರ್ಜಿದಾರರಿಗೆ ನಿಗದಿತ ಸಮಯದೊಳಗೆ ಸೇವೆಗಳು ದೊರಕುವುದಲ್ಲದೆ ಸಕಾಲ ವ್ಯವಸ್ಥೆಯ ವೆಬ್‌ಸೈಟ್‌ನಲ್ಲಿ ಪಾರದರ್ಶಕವಾಗಿ ಅರ್ಜಿಯ/ಸೇವೆಯ ಮಾಹಿತಿಗಳು ದೊರಕುತ್ತದೆ ಹಾಗೂ ಹಲವು ಸೇವೆಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಯಾವುದೇ ದೂರು ಸಲ್ಲಿಸಲು/ಹೆಚ್ಚಿನ ಮಾಹಿತಿ ಪಡೆಯಲು ಸಕಾಲ ಕರೆ ಕೇಂದ್ರದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಒಟ್ಟಾರೆ ನಾಗರೀಕರಿಗೆ ನಿಗದಿತ ಸಮಯದೊಳಗೆ ಸೇವೆಗಳನ್ನು ಒದಗಿಸುವ ಉತ್ತಮ ಆಡಳಿತ ಪದ್ಧತಿಯನ್ನು ರಾಜ್ಯದಲ್ಲಿ ಸಕಾಲದಡಿ ಜಾರಿಗೆ ತರಲಾಗಿರುತ್ತದೆ.